ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अक्टूबर-दिसम्बर २०१९



ಪ್ರೊ. ಎಂ.ಎಸ್. ವಾಗಣಗೇರಿ
C/o ಪ್ರೊ. ಎಂ.ಎಸ್.ಬ್ಯಾಳಕಿ
ಮನೆ ನಂ.೬೫ ಕೆ.ಎಚ್. ಕಾಲೋನಿ
ಸೋಲಾಪುರ ರಸ್ತೆ ವಿಜಯಪುರ-೫೮೬೧೦೧.

# ಪರಿವಿಡಿ


೧. ಹೀಗೇಕೆ ? • ಮೂಲ ಹಿಂದಿ ಪ್ರೊ : ಸಾಹೇಬಹುಸೇನ ಜಹಾಗೀರದಾರ ಕನ್ನಡಕ್ಕೆ ಪ್ರೊ : ಎಸ್.ಟಿ.ಮೇರವಾಡೆ. ೭

೨. ಕುವೆಂಪು–ಬೇಂದ್ರೆಯವರ ದೃಷ್ಟಿಯಲ್ಲಿ ಕವಿ–ಕಾವ್ಯ • ಪ್ರೊ. ಬಿ. ಬಿ. ಡೆಂಗನವರ ೨೪

೩. ಹೃದಯ ಅರಳುವ ಶಿಕ್ಷಣ • ಡಾ. ವಿಷ್ಣು ಎಂ. ಶಿಂದೆ ೨೯

೪. ಸ್ವಾತಂತ್ರ್ಯ ಹೋರಾಟದಲ್ಲಿ ವೀರ ಸಿಂಧೂರ ಲಕ್ಷ್ಮಣನ ಪಾತ್ರ • ಡಾ. ಸಿ. ಎಂ. ತಳವಾರ ೪೩

೫. ತಿಂಥಣಿ ಮೌನೇಶ್ವರ ಕುರಿತ ಸಾಹಿತ್ಯ : ಒಂದು ಅವಲೋಕನ • ಡಾ. ಎಂ. ಎಸ್. ಮಾಗಣಗೇರಿ ೪೮

೬ ಕರ್ನಾಟಕ ಕರಾವಳಿಯ ಬ್ರಾಹ್ಮಣ ಪರಂಪರೆಯಲ್ಲಿ 'ಪತಿತ ಬ್ರಾಹ್ಮಣ್ಯ'ದ ಸಮಸ್ಯೆ • ಮಂಜುನಾಥ ಕರಬ ೫೩

೭ ಶರಣ ಸಾಹಿತ್ಯದಲ್ಲಿ ವಚನಕಾರರ ಪಾತ್ರ ಮತ್ತು ಜನ ಜಾಗೃತಿ • ಡಾ. ಲಿಂಗರಾಜ ಸಿ. ಮುಳ್ಳಳ್ಳಿ ೬೦

೮. ಅನುಪಮಾ ನಿರಂಜನರ ಆತ್ಮಕಥನಗಳಲ್ಲಿ ಸ್ತ್ರೀ ಸಂವೇದನೆಗಳು • ದೇವಿಂದ್ರಮ್ಮ ಶರಣಪ್ಪ ೬೫

ಅಂಕಣ – ಎಂಟು

೯. ನಾನು ನಾನಾಗಿ ಇರಬಹುದು • ಡಾ. ಆರ್. ವಿ. ಪಾಟೀಲ ೬೯

# ತಿಂಥಣಿ ಮೌನೇಶ್ವರ ಕುರಿತ ಸಾಹಿತ್ಯ : ಒಂದು ಅವಲೋಕನ

• ಡಾ. ಎಂ. ಎಸ್. ಮಾಗಣಗೇರಿ

ಹದಿನೇಳನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಾಳಿ-ಬದುಕಿದ ಪವಾಡ ಪುರುಷರಲ್ಲಿ ತಿಂಥಣಿ ಮೌನೇಶ ಅಗ್ರಗಣ್ಯ. ಪವಾಡ ಪುರುಷನಾಗಿ, ಸಮಾಜ ಸುಧಾರಕನಾಗಿ, ವಚನಕಾರನಾಗಿ ಕನ್ನಡಿಗರಲ್ಲಿ ಪೂಜ್ಯನಿಯ ಸ್ಥಾನ ಪಡೆದಿದ್ದಾನೆ. ದೇವರ ಗೋನಾಳದಲ್ಲಿ ಅವತರಿಸಿ ತಿಂಥಣಿ ಸುಕ್ಷೇತ್ರದಲ್ಲಿ ಐಕ್ಯನಾದ ಈತನ 'ಬಸವಣ್ಣ' ಅಂಕಿತದ ಸುಮಾರು ೮೦೦ ವಚನಗಳು ಲಭ್ಯವಾಗಿವೆ. ಹಿಂದೂ ಧರ್ಮದ ಹಲವಾರು ಪಂಗಡಗಳ ನಡುವೆ ಬಾಂಧವ್ಯ ಬೆಸೆಯುವ ಮತ್ತು ಹಿಂದೂ-ಮುಸ್ಲಿಂರ ಮಧ್ಯ ಭಾವೈಕ್ಯ ಸಾಧಿಸುವಲ್ಲಿ ಈತನ ಕಾರ್ಯ ಶ್ಲಾಘನೀಯವಾದದ್ದು. ಮೌನೇಶನ ಚತುರ್ಧಾಮಗಳೆಂದೇ ಗುರ್ತಿಸಿಕೊಂಡಿರುವ ದೇವರ ಗೋನಾಳ, ಲಿಂಗನಬಂಡಿ, ವರವಿ ಮತ್ತು ತಿಂಥಣಿಗಳಲ್ಲದೆ ಕರ್ನಾಟಕದ ಹಲವಾರು ಕಡೆ ಈತನ ಗುಡಿಗಳಿವೆ. ಅದಲ್ಲದೆ ಈ ಮಹಾತ್ಮನ ಕುರಿತು ಸುಪ್ರಭಾತಗಳು, ಭಜನಾ ಪದಗಳು, ಸ್ತೋತ್ರಗಳು ಅಷ್ಟೋತ್ತರಗಳು ಮೊದಲಾದ ಭಕ್ತಿ ಪ್ರಧಾನ ಜನಪದ ಸಾಹಿತ್ಯವಲ್ಲದೆ ವಿಫುಲವಾದ ಶಿಷ್ಟ ಸಾಹಿತ್ಯ ಕೂಡಾ ರಚನೆಯಾಗಿದೆ. ಕಾವ್ಯಗಳು, ನಾಟಕಗಳು, ಭಾವಗೀತೆಗಳು, ಗದ್ಯ ಗ್ರಂಥಗಳು, ಜೀವನ ಚರಿತ್ರೆಗಳು, ಸಂಶೋಧನೆಗಳು, ವಚನಗಳು, ಬಿಡಿ ಲೇಖನಗಳು ರಚನೆಗೊಂಡು ಮೌನೇಶನ ಮಹಾತ್ಮೆಯನ್ನು ನೂರ್ಮಡಿಗೊಳಿಸಿವೆ.

**ಕಾವ್ಯಗಳು** : ಅವತಾರ ಪುರುಷ ಮೌನೇಶನ ಕುರಿತು ಶಂಕರ ಕವಿ ರಚಿಸಿದ 'ಶರಣ ಮೋನಪ್ಪಯ್ಯನ ಚರಿತ್ರೆ' (೧೭೫೪) ಎಂಬ ಸಾಂಗತ್ಯ ಕೃತಿಯೇ ಮೊದಲ ಕಾವ್ಯವಾಗಿದೆ. ಒದು ಪ್ರಕಟವಾಗಿಲ್ಲವಾದರೂ ಡಾ. ಎಂ. ಎಂ. ಪಡಶೆಟ್ಟಿಯವರು ತಮ್ಮ ಪಿ.ಎಚ್.ಡಿ ಪ್ರಬಂಧದಲ್ಲಿ ಕಥಾ ಸಾರವನ್ನು ವಿವೇಚಿಸಿದ್ದಾರೆ. ಸುರಪುರವಾಸಿಯಾದ ಮೌನೇಶ ಚಿನ್ನದ ಕೆಲಸ ಮಾಡುವ ಅಕ್ಕಸಾಲಿಗನಾಗಿ ಮಾಡಿದ ಹಲವಾರು ಪವಾಡಗಳು ಇಲ್ಲಿವೆ. ಶಂಕರ ಕವಿಯ ನಂತರ ಚಿನ್ನದಗುಡಿ ಬೋಳಮಲ್ಲ ಕವಿ 'ಮೌನೇಶ್ವರ ಬಾಲಲೀಲೆ' ಎಂಬ ಭಾಮಿನೀ ಷಟ್ಪದಿಯ ಕಾವ್ಯ ರಚಿಸಿದ್ದಾನೆ. ನಡುಗನ್ನಡ ಭಾಷೆಯಲ್ಲಿ ರಚನೆಯಾಗಿರುವ ಈ ಕೃತಿಯಲ್ಲಿ ನಿರೂಪಿತವಾಗಿರುವ ಕಥಾವಸ್ತು ಮುಂದಿನವರಿಗೆ ಆಕರ ಗ್ರಂಥವಾಗಿ ವಿಕಾಸಗೊಂಡಿದೆ.

ಪಂಡಿತರತ್ನ ಲಿಂಗಾಚಾರ್ಯ ಕಾಳಾಚಾರ್ಯ ಮಾಗೋಡು ಅವರಿಂದ ರಚಿತವಾದ 'ಮೌನೇಶ ವಿಜಯ' ಎಂಬ ಗದ್ಯ ಕೃತಿಯನ್ನು ಆಕರವನ್ನಾಗಿ ಮಾಡಿಕೊಂಡು ವಿಶ್ವಬ್ರಹ್ಮವಂಶಸಂಭೂತರಾದ ಚಂದ್ರಾಚಾರ್ಯ ಲಿಂಗಾಚಾರ್ಯ ಮಾಗೋಡರು 'ಮೌನೇಶ ವಿಲಾಸ' (೧೯೮೦) ಎಂಬ ಭಾಮಿನೀ ಷಟ್ಪದಿಯ ಕಾವ್ಯವನ್ನು ರಚಿಸಿದ್ದಾರೆ. ಮೌನೇಶ್ವರ ಕಾವ್ಯ ಪರಂಪರೆಯಲ್ಲಿ ಇದೊಂದು ಉಲ್ಲೇಖನಿಯ ಗ್ರಂಥವಾಗಿದೆ. ನಡುಗನ್ನಡ ಭಾಷಾ ಶೈಲಿಯ ಸಂಭಾಷಣೆಗಳು ಮನೋಹರವಾಗಿ ಚಿತ್ರಿತಗೊಂಡಿದೆಯಲ್ಲದೆ ಇದೊಂದು ಆಕರ ಗ್ರಂಥವಾಗಿದೆ. ನಂತರ ಭಾಮಿನೀ ಷಟ್ಪದಿಯಲ್ಲಿಯೇ ರಚನೆಯಾದ ಶ್ರೀ ದೇವೇಂದ್ರ ಮಹಾಸ್ವಾಮಿಗಳ 'ಮೌನೇಶ್ವರ ಪುರಾಣ' (೧೯೮೮) ಮತ್ತೊಂದು ಉಲ್ಲೇಖನೀಯ ಕಾವ್ಯ ಗ್ರಂಥವಾಗಿದೆ. ಕೆ. ವೀರಪ್ಪ ಅವರ 'ಜಗದ್ಗುರು ಶ್ರೀ ಶ್ರೀ ಮೌನೇಶ್ವರ ಪುರಾಣ' (೧೯೯೩) ಕೂಡಾ ಭಾಮಿನೀ ಷಟ್ಪದಿ ಕಾವ್ಯಗಳ ಸಾಲಿಗೆ

RNI Regd. No. KARBIL/2014/54464



ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ

ಒಂದು ತೋಟದಲ್ಲಿ ಹಲವು ಬಣ್ಣದ ಹೂಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳ ಮಕರಂದ ಬೀರಲಿ
ನಮ್ಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ

ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೇ?
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೇ?
ಈ ಸೃಷ್ಟಿಯಲ್ಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ

ಮಣ್ಣಿನಿಂದ ಆದ ಮಡಿಕೆ ಮಣ್ಣಿಗನ್ಯವೇ?
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ?
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ

– ಇಬ್ರಾಹೀಮ್ ಸುತಾರ

हम सब भारतीय हैं यह भावना जागृत हो
हे प्रभु, हमारे बीच के भेद-भाव दूर हो

एक ही बाग के रंगबिरंगे फूल,
उसी तरह हमारे देश में हैं अनेक मत
उन फूलों-सा हर मत का मकरंद फैले
हे प्रभु, हमारे बीच के भेद-भाव दूर हो।
हमने घर बनाए तो भूमि ने ज्ञाति पूछी ?

साँस लेते समय हवा ने कुल पूछा ?
इस सृष्टि में सभी समान रूप से जिएँ
हे प्रभु हमारे बीच के भेद-भाव दूर हो ।

मिट्टी से बना घडा क्या मिट्टी से अलग है?
सोने से बना जेवर, क्या सोने से भिन्न है?
तुमसे बने जीव तुमसा ही दिखे
हे प्रभु, हमारे बीच के भेद-भाव दूर हे ।

- इब्राहीम सुतार

ISSN 2320-0391
9 772320 039008

**सौम्य प्रकाशन**
'कबीर कुंज' महाबलेश्वर कॉलनी,
दर्गा जेल के सामने,
विजयपुर – ५८६१०३ (कर्नाटक)

सौ

**ಸೌಮ್ಯ ಪ್ರಕಾಶನ**
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩. (ಕರ್ನಾಟಕ)